ಈ) ವ್ಯಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಿದ ನಂತರ ಬಡ್ತಿ ನೀಡಲಾಗುವುದು.

ಶ್ರೀ ಕೆ. ಸೋಮಪ್ಪ ಸುವರ್ಣ:- ಮಾನ್ಯ ಉಪಾಧ್ಯಕ್ಷಣಿಯವರೇ, ಮಾನ್ಯ ಸಚಿವರು ಪೋಲೀಸ್ ಇಲಾಖೆಯಲ್ಲಿ ಎಷ್ಟು ಶೀಘ್ರಲಿಪಿಗಾರರು ಬಡ್ತಿಯನ್ನು ಪಡೆದಿರುತ್ತಾರೆ ಎಂದು ಕೇಳಿದಾಗ ಇಲ್ಲ ಎಂದು ಹೇಳಿರುತ್ತಾರೆ. ಕೇಡರ್ ಮತ್ತು ನೇಮಕಾತಿ ಸೇವಾ ನಿಯಮಗಳ ತಿದ್ದುಪಡಿ ಪ್ರಸ್ತಾವನೆ ಇನ್ನೂ ಸಹ ಪರಿಶೀಲನೆಯಲ್ಲಿದೆ ಎಂದು ತಿಳಿಸಲಾಗಿದೆ. ಈ ವಿಭಾಗದಲ್ಲಿ ಕೆಲಸ ಮಾಡುತ್ತಾ ಇರುವಂತಹ ಶೀಘ್ರಲಿಪಿಗಾರರು ಯಾವ ಸೌಲಭ್ಯವನ್ನೂ, ಬಡ್ತಿಯನ್ನೂ ಹೊಂದದೇ ಬಹಳಷ್ಟು ತೊಂದರೆಯಲ್ಲಿದ್ದಾರೆ. ಇದರ ಬಗ್ಗೆ ಶೀಘ್ರವಾಗಿ ಪರಿಶೀಲನೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಈ ಬಡ್ತಿ ಸೌಲಭ್ಯ ಈ ತನಕ ಸಹ ಗೃಹ ಇಲಾಖೆಯ ಪೋಲೀಸ್ ವಿಭಾಗದಲ್ಲಿ ಸಿಗಲಿಲ್ಲ. ಆದುದರಿಂದ ಈ ವಿಷಯದಲ್ಲಿ ತಾವು ಯಾವಾಗ ಎಷ್ಟು ಸಮಯದೊಳಗೆ ಈ ಬಡ್ತಿಯನ್ನು ಕೊಡುತ್ತೀರಿ ಎಂದು ಹೇಳಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಪೋಲೀಸ್ ಇಲಾಖೆಯಲ್ಲಿ ಸ್ಟೆನೋಗ್ರಾಫರ್ಸ್ ಪ್ರಮೋಷನ್ ಬಹಳ ವರ್ಷದಿಂದ ನಿಂತಿದೆ ಎಂದು ಹೇಳಿದ್ದಾರೆ. ಇದು ನಿಜ ಎಂಬುದನ್ನು ಒಪ್ಪಿದ್ದೇನೆ. ಅದಕ್ಕೆ ಸಿ ಆಂಡ್ ಆರ್ ರೂಲ್ಸ್ ಅಮೆಂಡ್‌ಮೆಂಟ್ ಆಗಬೇಕಾಗಿದೆ. ಆದು ಡಿ. ಪಿ. ಎ. ಆರ್ ನಿಂದ ಫೈನಾನ್ಸ್‌ಗೆ ಹೋಗಿ ಅಲ್ಲಿಂದ ಕೂಡ ಬರುತ್ತಿದೆ. ಬಹಳ ಶೀಘ್ರದಲ್ಲಿ ಆಗುತ್ತದೆ. ನಾನು ಒಂದು ಮೀಟಿಂಗ್ ಮಾಡಿದ್ದೇನೆ. ಅತಿ ಶೀಘ್ರದಲ್ಲಿ ಅವರಿಗೆ ಪ್ರಮೋಷನ್ ಕೊಡತಕ್ಕಂಥ ಕೆಲಸ ಮಾಡುತ್ತೇವೆ. ತಮ್ಮ ಮನಸ್ಸಿನಲ್ಲಿ ಏನಿದೆ, ಅದಕ್ಕೆ ಅನುಗುಣವಾಗಿ ಕೆಲಸ ಮಾಡುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ:- ಪೋಲೀಸ್ ಇಲಾಖೆ ಬಹಳ ಮುಖ್ಯವಾದುದು. ಅಲ್ಲಿರತಕ್ಕಂಥ ನೌಕರರಿಗೆ ಈ ವಿಭಾಗದಲ್ಲಿ ಆದಷ್ಟು ಬೇಗನೆ ಬಡ್ತಿ ಸೌಲಭ್ಯ ಸಿಗುವಂತಹ ಒಂದು ಸರದರ್ಭ ಕಲ್ಪಿಸಬೇಕೆಂದು ಹೇಳುತ್ತೇನೆ.

ಶ್ರೀ ಧರ್ಮಸಿಂಗ್:- ಈಗ ಪೋಲೀಸ್ ಇಲಾಖೆಯಲ್ಲಿ ೩೧೪ ಹುದ್ದೆಗಳಿಗೆ ಪಿ ಸಿ ಯಿಂದ ಹೆಚ್‌ಸಿ ಗೆ ಹಾಗೂ ಹೆಚ್‌ಸಿಯಿಂದ ಎ ಎಸ್‌ಐ ಹುದ್ದೆಗೆ ಬಡ್ತಿ ನೀಡಿದೆ, ಬೇರೆ ಬೇರೆ ವರ್ಗಕ್ಕೂ ಕೂಡಾ ಬಡ್ತಿ ಕೊಟ್ಟಿದೆ. ಸ್ಟೆನೋಗ್ರಾಫರ್ಸ್‌ಗೂ ಕೂಡಾ ಬಡ್ತಿ ಕೊಡತಕ್ಕಂಥಾದ್ದು ಏನಿದೆ ಆದನ್ನು ಮಾಡುತ್ತೇವೆ.

## ಧಾರವಾಡದಲ್ಲಿ ಉಚ್ಚನ್ಯಾಯಾಲಯದ ಪೀಠ ಸ್ಥಾಪನೆಯ ಬಗ್ಗೆ

೨೨೨೧ ಶ್ರೀ ಆರ್. ಎನ್. ನಾಯ್ಕ (ಭಟ್ಕಳ್):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದಲ್ಲಿ ಹೈಕೋರ್ಟ್ ಪೀಠ ತೆರೆಯಲು ಸರ್ಕಾರ ತೀರ್ಮಾನ ಕೈಕೊಂಡಿದೆಯೇ?

ಆ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಎಲ್ಲೆಲ್ಲಿ ಸಿವಿಲ್ ಕೋರ್ಟ್‌ಗಳು ಮತ್ತು ಮುನ್ಸಿಫ್ ಕೋರ್ಟ್‌ಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ?

ಇ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಸಿವಿಲ್ ಕೋರ್ಟ್ ತೆರೆಯಲು ಸ್ಥಳೀಯ

ಶಾಸಕರಿಂದ ಹಾಗೂ ಇತರರಿಂದ ಬೇಡಿಕೆ ಬಂದಿದ್ದನ್ನು ಸರ್ಕಾರ ಗಮನಿಸಿದೆಯೇ, ಹಾಗಿದ್ದಲ್ಲಿ ಸರ್ಕಾರದ ನಿರ್ಣಯಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) ಉಚ್ಚ ನ್ಯಾಯಾಲಯದ ಪೀಠವನ್ನು ಅದರ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸುವ ಬಗೆಗಿನ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಒಪ್ಪಿಗೆ ಪಡೆಯಬೇಕಾಗಿದ್ದು, ಅದರಂತೆ ಉಚ್ಚ ನ್ಯಾಯಾಲಯದ ಒಪ್ಪಿಗೆಯನ್ನು ಕೋರಲಾಗಿತ್ತು. ಆದರೆ, ಈ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯವು ಇನ್ನೂ ಒಪ್ಪಿಗೆ ನೀಡಿಲ್ಲ. ಈ ಬಗ್ಗೆ ಪತ್ರ ವ್ಯವಹಾರ ಮುಂದುವರೆದಿದೆ.

ಆ) ೧೯೯೧-೯೨ನೇ ಸಾಲಿನಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಸಿವಿಲ್ ಕೋರ್ಟ್ ಮತ್ತು ಮುನ್ಸಿಫ್ ಕೋರ್ಟ್‌ಗಳನ್ನು ಸ್ಥಾಪಿಸಲಾಗಿದೆ:

೧) ವಿರಾಜಪೇಟೆ - ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ

೨) ಕಲಘಟಗಿ )
೩) ಗುಂಡ್ಲುಪೇಟೆ ) - ಮುನ್ಸಿಫ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ್ ನ್ಯಾಯಾಲಯ
೪) ಹೊಸಕೋಟೆ )
೫) ಬೇಲೂರು )

೬) ದಾವಣಗೆರೆ - ಅಡಿಷನಲ್ ಮುನ್ಸೀಫ್‌ರ ನ್ಯಾಯಾಲಯ

೭) ಬೀದರ್ )
೮) ಕಾರ್ಕಳ ) - ಅಡಿಷನಲ್ ಮುನ್ಸೀಫ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯ

೯) ಬೆಂಗಳೂರು - ವಿಶೇಷ ಮ್ಯಾಜಿಸ್ಟ್ರೇಟರ್ ನ್ಯಾಯಾಲಯ (ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ

ಇ) ಹೌದು, ಪರಿಶೀಲಿಸಲಾಗುತ್ತಿದೆ

ಶ್ರೀ ಆರ್. ಎನ್. ನಾಯಕ್:- ಧಾರವಾಡದಲ್ಲಿ ಉಚ್ಚನ್ಯಾಯಾಲಯದ ಪೀಠ ಸ್ಥಾಪಿಸುವ ಬಗ್ಗೆ ಹೈಕೋರ್ಟ್ ಒಪ್ಪಿಗೆ ನೀಡಿಲ್ಲ, ಪತ್ರ ವ್ಯವಹಾರ ನಡೆಯುತ್ತಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಕೇವಲ ಪತ್ರ ವ್ಯವಹಾರ ನಡೆಸುವುದರಿಂದ ವಿಳಂಬವಾಗಬಹುದು. ಈ ಕಾರಣಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಹೈಕೋರ್ಟ್‌ನ ಸಂಬಂಧಪಟ್ಟ ನ್ಯಾಯಾಧೀಶರ ಜೊತೆಗೆ ವಿನಾದರೂ ಮಾತುಕತೆ ನಡೆಸುವುದಕ್ಕೆ ಮನಸ್ಸು ಮಾಡುತ್ತಾರೆಯೇ ಹೇಗೆ ಎಂಬುದು ಒಂದು. ಇನ್ನೊಂದು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿ ಸಿವಿಲ್ ಕೋರ್ಟ್ ಸ್ಥಾಪನೆ ಬಗ್ಗೆ ಸ್ಥಳೀಯ ಶಾಸಕರಿಂದ ಒತ್ತಡ ಬಂದಿರುವುದು ನಿಜ ಎಂದು ಹೇಳಿದ್ದಾರೆ ಮತ್ತು ಇದು ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದಾರೆ. ಹೊನ್ನಾವರದಲ್ಲಿ ಮೊದಲು ಡಿಸಿಟ್ರಿಕ್ಟ್ ಕೋರ್ಟ್ ಇತ್ತು, ಈಗ ಆ ಕೋರ್ಟ್ ಬಿಲ್ಡಿಂಗ್ ಖಾಲಿಯಾಗಿದೆ; ಬಹಳ ದೊಡ್ಡ ಕೋರ್ಟ್ ಬಿಲ್ಡಿಂಗ್ ಇದೆ; ಅಲ್ಲಿ ಸಿವಿಲ್ ಕೋರ್ಟ್ ಸ್ಥಾಪನೆ ಮಾಡಿದರೆ ಕೋರ್ಟ್ ಬಿಲ್ಡಿಂಗ್‌ಗೆ ತೊಂದರೆ ಇರುವುದಿಲ್ಲ. ಈ ಕಾರಣಕ್ಕಾಗಿ ಈ

ವಿಷಯವನ್ನು ಮನಗಂಡು ಅಲ್ಲಿ ಸಿವಿಲ್ ಕೋರ್ಟ್‌ನ್ನು ಸ್ಥಾಪನೆ ಮಾಡುವುದಕ್ಕೆ ಸರಕಾರ ಸಿದ್ಧವಾಗಿದೆಯೇ ಹೇಗೆ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):- ಮಾನ್ಯ ಉಪಾಧ್ಯಕ್ಷಣಿಯವರೇ, ಎರಡು ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಮೊದಲನೆಯದು ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದ ಒಂದು ಪೀಠ ಅಂದರೆ ಬೆಂಚ್ ಆಫ್ ಕರ್ನಾಟಕ ಹೈಕೋರ್ಟ್‌ನ್ನು ಉತ್ತರ ಕರ್ನಾಟಕ ಭಾಗದ ಧಾರವಾಡದಲ್ಲಿ ಸ್ಥಾಪನೆ ಮಾಡತಕ್ಕ ಉದ್ದೇಶ ಸರಕಾರಕ್ಕಿದೆಯೇ ಎಂಬ ವಿಚಾರದಲ್ಲಿ ತಮಗೆ ಈಗಾಗಲೇ ಹೇಳಿದ್ದೇನೆ. ಇಲ್ಲಿ ಧಾರವಾಡ, ಬೆಳಗಾಂ, ವಿಜಾಪುರ ಎಂಬ ಪ್ರಶ್ನೆ ಇಲ್ಲ. ಅದು ಪ್ರತ್ಯೇಕ. ಆ ಪ್ರಶ್ನೆಗೆ ನಾನು ಹೋಗುವುದಿಲ್ಲ. ಈಗ ಮಾನ್ಯ ಸದಸ್ಯರ ಗಮನಕ್ಕೆ ತರುವ ಹಾಗೆ ನಮ್ಮ ಧೋರಣೆ ಏನು ಎಂದರೆ, ಮೊದಲು ಹೈಕೋರ್ಟ್ ಬೆಂಚ್ ಒಂದನ್ನು ಉತ್ತರ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ಥಾಪನೆ ಮಾಡುವುದು, ಯಾವ ಭಾಗ ಎಂಬುದಕ್ಕೆ ಅನಂತರ ಬರೋಣ; ಈಗ ಆ ಭಾಗಕ್ಕೆ ಹೋದರೆ ಮೈನ್ ಕೊಶ್ಚನ್ನೇ ಕಿತ್ತುಕೊಂಡು ಹೋಗಬಹುದು. ಆದ್ದರಿಂದ ಅದಕ್ಕೆ ಅವಕಾಶ ಬೇಡ. ಮೊದಲು ಉತ್ತರ ಕರ್ನಾಟಕ ಭಾಗದಲ್ಲಿ ಮಾಡಬೇಕೇ ಬೇಡವೇ ಎನ್ನತಕ್ಕಂಥ ವಿಚಾರದಲ್ಲಿ ಸರ್ಕಾರದ ಸ್ಪಷ್ಟವಾಗಿರತಕ್ಕಂಥ ಅಭಿಪ್ರಾಯವನ್ನು ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿ ನಾವು ಸ್ಪಷ್ಟ ಪಡಿಸಿದ್ದೇವೆ. ಸರ್ಕಾರದ ಉದ್ದೇಶ, ಇವತ್ತು ನ್ಯಾಯಾಲಯಗಳು ಯಾವುದೇ ಇರಬಹುದು, ಜನರ ಹಿತಕೋಸ್ಕರ ನಾವು ಮಾಡಬೇಕೆಂಬುದಾಗಿದೆ. ನಾವು ತೆಗೆದುಕೊಂಡು ಹೋಗಿ ಬಿಜಾಪುರ, ಬೆಳಗಾಂ, ಬೀದರ್ ಗುಲ್ಬರ್ಗ ಕಡೆಗಳಿಂದ ಬೆಂಗಳೂರಿಗೆ ಬರಬೇಕಾದರೆ ತೊಂದರೆಯಾಗುತ್ತದೆ. ಇವತ್ತು ಮಹಾರಾಷ್ಟ್ರದಲ್ಲಿ ಔರಂಗಬಾದ್ ಮತ್ತು ನಾಗಪುರದಲ್ಲಿ ಮಾಡಿದ್ದಾರೆ, ಒಂದೇ ರಾಜ್ಯದಲ್ಲಿ, apart from the Bench of the Bombay High Court established in Goa. ಅದು ಗೋವಾ ಪ್ರತ್ಯೇಕ ರಾಜ್ಯ ಅಂತ ಇಟ್ಟುಕೊಳ್ಳೋಣ. ಅದೇ ರೀತಿಯಾಗಿ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಕೂಡ ಬೇರೆ ಬೇರೆ ಕಡೆ ಬೆಂಚ್ ಮಾಡಿದ್ದಾರೆ. ಮೊನ್ನೆ ಮೊನ್ನೆ ಅಸ್ಸಾಂನಲ್ಲಿ ಬೇರೆ ಬೆಂಚ್‌ಗೆ ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಟ್ಟಿದ್ದಾರೆ. ಅಂದ ಮೇಲೆ why not here in Karnataka? ಇವತ್ತು ಜನರು ಒಂದು ಸಾರಿ ಇಲ್ಲಿಗೆ ಬರಬೇಕಾದರೆ ಬಸ್ಸ್ ಚಾರ್ಜ್, ಟ್ರೈನ್ ಚಾರ್ಜ್, ಹೋಟೆಲ್ ಚಾರ್ಜ್‌ಗಳಿಗೆ ಎಷ್ಟೊಂದು ಹಣ ಖರ್ಚು ಮಾಡಬೇಕಾಗಿದೆ. ಈಗ ಜನರ ಗತಿ ಏನಾಗುತ್ತಿದೆ ಎನ್ನತಕ್ಕಂಥ ವಿಚಾರವನ್ನು ಗಮನಿಸಿ ನಾವು ಒತ್ತಡವನ್ನು ಈಗಾಗಲೇ ಕೇಂದ್ರ ಸರ್ಕಾರದ ಮೇಲೆ ತಂದಿದ್ದೇವೆ. ಆ ಮೇಲೆ ಹೈಕೋರ್ಟ್ ಮುಖ್ಯ ನ್ಯಾಯಾಧೀಶರ ಜೊತೆಗೂ ಮಾತುಕತೆ ಏನಾದರೂ ಮಾಡಿದ್ದೀರಾ ಎನ್ನತಕ್ಕಂಥ ಪ್ರಶ್ನೆಯನ್ನು ತಾವು ಕೇಳಿದಿರಿ. ಮೊನ್ನೆ ತಾನೆ ನಮ್ಮ ರಾಜ್ಯದ ಕಾನೂನು ಸಚಿವರಾದ ಶ್ರೀ ಬ್ಲೇಸಿಯಸ್‌ಡಿಸೌಜ ಅವರೂ ಕೂಡ ಇದ್ದರು. ರಾಜ್ಯ ಹೈಕೋರ್ಟ್ ಮುಖ್ಯನ್ಯಾಯಾಧೀಶರಾದ ಬರೋಚಾಜೀ ಅವರು, ಹಾಗೂ ನಾವು ಮೂರು ಜನರು ಕುಳಿತುಕೊಂಡು ಎಲ್ಲಾ ಮಾತನಾಡಿದ್ದೇವೆ. ಮಾತನಾಡಿದ ಸಂದರ್ಭದಲ್ಲಿ ನಾವು ಸ್ಪಷ್ಟವಾಗಿರತಕ್ಕಂಥ ಸರ್ಕಾರದ ಅಭಿಪ್ರಾಯವನ್ನು ಅವರಿಗೆ ಹೇಳಿದ್ದೇವೆ. Government wants to establish a High Court Bench in one of the places of the North-Karnataka area ಅಷ್ಟೆ. ನಾವು ಜಾಗ ಯಾವುದು ಏನು ಎನ್ನತಕ್ಕಂಥಾದ್ದನ್ನು ನಿಗದಿ ಮಾಡುವುದಕ್ಕೆ ಹೋಗಿಲ್ಲ. ಇದರಲ್ಲಿ ಏನಾಗಿದೆ ಎಂದರೆ ಕರ್ನಾಟಕ ಹೈಕೋರ್ಟ್‌ನವರು

ರೆಕಮೆಂಡೇಷನ್ ಮಾಡಬೇಕು ಹಾಗೂ ಅವರ ಅಭಿಪ್ರಾಯವನ್ನು ಕೂಡ ಕೊಡಬೇಕು. ಅದನ್ನು ಕೇಂದ್ರ ಸರ್ಕಾರದವರು ಕೇಳುತ್ತಾರೆ. ಮಾನ್ಯ ಡಿ. ಎಂ. ಚಂದ್ರಶೇಖರ್‌ರವರು ಮುಖ್ಯ ನ್ಯಾಯಾಧೀಶರಾಗಿದ್ದಂತಹ ಕಾಲದಲ್ಲಿ ಈ ವಿಷಯದಲ್ಲಿ ತೀರ್ಮಾನ ಮಾಡಿದ್ದಾರೆ. ಒಂದು ಹೈಕೋರ್ಟ್ ಪೀಠ ಕೂಡ ಉತ್ತರ ಕರ್ನಾಟಕ ಭಾಗದಲ್ಲಿ ಮಾಡಬೇಕು ಎನ್ನತಕ್ಕಂಥ ತೀರ್ಮಾನವನ್ನು ಅವರು ಮಾಡಿದ್ದಾರೆ. ನಾನು ಇದನ್ನು ರಾಜ್ಯದ ಜನತೆಗೆ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅನಂತರ ಬಂದವರು ಬೇಡ ಎಂದು ತೀರ್ಮಾನ ಮಾಡಿ ಇಟ್ಟಿದ್ದಾರೆ. ನನಗೆ ಇದು ಅರ್ಥವಾಗುತ್ತಿಲ್ಲ. ಇವತ್ತು ಇದನ್ನು ಜನರ ಹಿತದೃಷ್ಟಿಯಿಂದ ಮಾಡತಕ್ಕಂಥದ್ದು ಬಹಳ ಒಳ್ಳೆಯದು. ನಾನು ಸದನದ ಮುಖಾಂತರ ಹೈಕೋರ್ಟ್‌ನ್ನು ವಿನಂತಿ ಮಾಡುತ್ತೇನೆ. ಅವರು ಬೇಡ ಎನ್ನತಕ್ಕಂಥ ಅಭಿಪ್ರಾಯವನ್ನು ಇತ್ತೀಚೆಗೆ ತೆಗೆದುಕೊಂಡಿದ್ದಾರೆ. ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ನಮ್ಮ ಮುಖ್ಯ ನ್ಯಾಯಾಧೀಶರಿಗೆ ನಾವು ತಿಳಿಸಿದ್ದೇವೆ. ವಿನಂತಿ ಮುಖಾಂತರ ಕೂಡ ನಾವು ಅವರಿಗೆ ಹೇಳಿದ್ದೇವೆ. ನೀವು ರೆಕಮೆಂಡ್ ಮಾಡಿ ಕಳುಹಿಸಿಕೊಡಿ ಎನ್ನತಕ್ಕಂಥ ಅಭಿಪ್ರಾಯವನ್ನು ಕೂಡ ನಾವು ಅವರಿಗೆ ತಿಳಿಸಿದ್ದೇವೆ. Now the High Court is seized of that matter. ಅವರ ಮುಂದೆ ಈ ವಿಚಾರ ಇಟ್ಟಿದ್ದೇವೆ. ಮೊನ್ನೆ ಮೊನ್ನೆ ತಾನೆ ದಿಲ್ಲಿಯಲ್ಲಿ ಕೇಂದ್ರ ಸರ್ಕಾರದ ಕಾನೂನು ಸಚಿವರಾದ ಶ್ರೀ ಕೆ ವಿಜಯಭಾಸ್ಕರ ರೆಡ್ಡಿಯವರ ಹತ್ತಿರ ಮಾತನಾಡಿದ್ದೇನೆ. ಅವರು ರೆಕಮೆಂಡೇಷನ್ ಬಂದ ತಕ್ಷಣ ನಾವು ಮಾಡಿಕೊಡುವುದಕ್ಕೆ ಸಿದ್ಧವಾಗಿದ್ದೇವೆ ಎನ್ನುವ ಅಭಿಪ್ರಾಯವನ್ನು ಕೂಡ ಕೊಟ್ಟಿದ್ದಾರೆ. In the meanwhile, ಅಸ್ಸಾಂನವರು ಮೊನ್ನೆ ಇಂತಹ ಪೀಠ ಮಾಡಿಕೊಂಡಿದ್ದಾರೆ. ಮೊನ್ನೆ ಅವರು ಒಂದು ರೆಸಲ್ಯೂಷನ್ ಪಾಸ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು ಮಾಡಿಕೊಂಡಿದ್ದಾರೆ. ನಾನು ಈಗಾಗಲೇ ಮೇಲ್ಮನೆಯಲ್ಲಿ ೪-೫ ದಿವಸಗಳಿಗೆ ಮುಂಚೆ ಈ ಬಗ್ಗೆ ತಿಳಿಸಿದ್ದೇನೆ. ಇಲ್ಲಿ ನಾವು ಒಂದು ರೆಸಲ್ಯೂಷನ್‌ನನ್ನು ಇನ್ನು ಒಂದೆರಡು ಮೂರು ದಿವಸಗಳಲ್ಲಿ ತರುತ್ತೇವೆ. ಮಾನ್ಯ ವಿರೋಧಪಕ್ಷದ ಮಿತ್ರರು ಸಭೆಗೆ ಬರಲಿ ಎನ್ನುವ ದೃಷ್ಟಿಯಿಂದ ತಡ ಮಾಡಿದ್ದೇವೆ. ಏಕೆಂದರೆ ಎಲ್ಲರೂ ಸೇರಿ ಈ ಒಂದು ತೀರ್ಮಾನ ಮಾಡಿದ್ದೇವೆ ಎನ್ನತಕ್ಕಂಥ ಒಂದು ಅಭಿಪ್ರಾಯ ಮೂಡಬೇಕು, ಅದಕ್ಕೆ ನಾವು ಎರಡೂ ಸದನಗಳಲ್ಲಿ ಒಂದು ರೆಸಲ್ಯೂಷನ್ ತರುತ್ತೇವೆ. ಉತ್ತರ ಕರ್ನಾಟಕ ಭಾಗದಲ್ಲಿ ಯಾವ ಜಾಗ ಎನ್ನುವ ಪ್ರಶ್ನೆ ಅಲ್ಲ. ನಮ್ಮ ರಾಜ್ಯದ ಹೈಕೋರ್ಟ್‌ನ ಒಂದು ಬೆಂಚ್ ಮಾಡುವುದಕ್ಕೆ ಒಪ್ಪಿಗೆ ನೀಡಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದಕ್ಕೋಸ್ಕರ ಒಂದು ನಿರ್ಣಯ ಕೊಡ ನಾವು ತರುತ್ತಿದ್ದೇವೆ. ಈಗ ಇನ್ನೊಂದು ಮೂರು ದಿವಸಗಳಲ್ಲಿ ನಿರ್ಣಯ ಕೊಡ ತರುತ್ತಿದ್ದೇವೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತಾ ಇನ್ನು ಎರಡನೆಯದು ತಮ್ಮ ಕ್ಷೇತ್ರ ಆಗಿರತಕ್ಕಂಥ ಹೊನ್ನಾವರದಲ್ಲಿ ಸಿವಿಲ್ ಕೋರ್ಟ್ ಪ್ರಾರಂಭ ಮಾಡುವುದಕ್ಕೆ ಎಲ್ಲಾ ತರಹದ ಇನ್‌ಫ್ರಾಸ್ಟ್ರಕ್ಚರ್ ಇದೆ ಎನ್ನತಕ್ಕಂತಹ ಮಾತನ್ನು ಹೇಳಿದ್ದೀರಿ. ನನಗೂ ಕೂಡ ವಿಚಾರ ಗೊತ್ತಿದೆ. ಎಲ್ಲಾ ಅಂಕಿಅಂಶಗಳನ್ನು ಕೂಡ ಕಲೆಕ್ಟ್ ಮಾಡುತ್ತಿದ್ದೇವೆ. ಅಲ್ಲಿ ಮಾಡತಕ್ಕಂಥ ಒಂದು ಸಂದರ್ಭ ಕಾಣುತ್ತಿದೆ. ಮಾಡಿದರೆ ಒಳ್ಳೆಯದು ಎನ್ನತಕ್ಕಂಥ ಅಭಿಪ್ರಾಯದ ಬಗ್ಗೆ ಸರ್ಕಾರ ಕೂಡ ವಿಚಾರ ಮಾಡುತ್ತಿದೆ. ಇದನ್ನು ವಿಚಾರ ಮಾಡಿ ಇದನ್ನು ಮಾಡತಕ್ಕಂಥ ಕಾರಣಗಳನ್ನು ಕೂಡ ಹುಡುಕಬೇಕಾಗಿದೆ. ವಿವರಗಳು ಬಂದ ತಕ್ಷಣ ಮಾಡಿ ಕೊಡತಕ್ಕಂಥ ಪ್ರಯತ್ನ ನಾವು ಮಾಡುತ್ತೇವೆ.